Bharat Vistaar

# ಹಸಿರು ಕ್ರಾಂತಿಗೆ ಎಐ ನೆರವು

ಬಿತ್ತನೆಗೆ ಸೂಕ್ತ ಸಮಯ ಯಾವುದು? ಮಾರುಕಟ್ಟೆಯಲ್ಲೀಗ ಯಾವ ಬೆಳೆಗೆ ಬೇಡಿಕೆಯಿದೆ? ಯಾವ ರೋಗಕ್ಕೆ ಯಾವ ರಾಸಾಯನಿಕ ಔಷಧಿ ಸಿಂಪಡಿಸಬೇಕು? ಅನ್ನದಾತನ ಇಂತಹ ಪ್ರಶ್ನೆಗಳಿಗೆ ಟಕಾಟಕ್ ಉತ್ತರಿಸಲು 'ಕೃಷಿ ವಿಜ್ಞಾನಿ'ಯೊಬ್ಬ ಬಂದಿದ್ದಾನೆ. ಆತ ಯಾರಂತ ತಿಳಿಯಲು ಓದಿ ಈ ಲೇಖನ.

■ ಶಶಿಕುಮಾರ್ ಸಿ.

ಬೆಳೆ ಇದ್ದರೆ ಬೆಲೆ ಇರಲ್ಲ, ಬೆಲೆ ಇದ್ದರೆ ಇಳುವರಿಯೇ ಇರಲ್ಲ. ಎರಡೂ ಇದ್ದಾಗ, ಇಲ್ಲದಿದ್ದಾಗಲೂ ದಲ್ಲಾಳಿಗಳ ಕಮಿಷನ್ ಕ್ವಾಟ್ಲೆ ತಪ್ಪಲ್ಲ. ಜೊತೆಗೆ ಹವಾಮಾನ ಬದಲಾವಣೆ, ನೀರಿನ ಕೊರತೆ, ರೋಗಬಾಧೆ, ಮಾರುಕಟ್ಟೆ ಕೊರತೆ ಹೀಗೆ ರೈತರ ಸಮಸ್ಯೆಗಳು ಒಂದೇ ಎರಡೇ...

ಸಮಸ್ಯೆಗಳ ನಡುವೆ ಹಿಂಡಿಹಿಪ್ಪೆಯಾಗಿರುವ ಬೇಸಾಯಗಾರರ ಬದುಕನ್ನು ಕೊಂಚ ನಿರಾಳವಾಗಿಸಲು ಕೇಂದ್ರ ಸರ್ಕಾರ ಎಐ ಆಧರಿತ 'ಭಾರತ್ ವಿಸ್ತಾರ್' (BharatVISTAAR) ಪೋರ್ಟಲ್ ಹಾಗೂ ಮೊಬೈಲ್ ಆ್ಯಪ್ ಪರಿಚಯಿಸಿದೆ. ಇದು ರೈತರ ಬಾಯಿಗೆ ಬಿರು ಬೇಸಿಗೆಯಲ್ಲಿ ತಂಬಿಗೆ ನೀರು ಸುರಿದಂತಹ ಸುದ್ದಿಯಾದರೂ, ಈ ವೇದಿಕೆಯನ್ನು ಸರಿಯಾದ ರೀತಿ ಬಳಸಿಕೊಂಡಲ್ಲಿ ಕೃಷಿಕರು ಲಾಭದತ್ತ ಮುಖಮಾಡಬಹುದು.

ದೇಶದಲ್ಲಿ ಗರಿಗೆದರುತ್ತಿರುವ ತಂತ್ರಜ್ಞಾನ ಆಧರಿತ ಕೃಷಿ ಚಟುವಟಿಕೆಯನ್ನು ಉತ್ತೇಜಿಸಲು 'ಭಾರತ್ ವಿಸ್ತಾರ್' ಪೂರಕವಾಗಿದೆ. ಇದನ್ನು ಭಾರತೀಯ ಕೃಷಿ ಕ್ಷೇತ್ರದ ಡಿಜಿಟಲ್ ಕ್ರಾಂತಿ ಎಂದೇ ಕೇಂದ್ರ ಬಣ್ಣಿಸುತ್ತಿದೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧರಿತ ಸಮಗ್ರ ಕೃಷಿ ಮಾಹಿತಿ ಒದಗಿಸುವ ವ್ಯವಸ್ಥೆಯನ್ನು ಈ ಪೋರ್ಟಲ್ ಹೊಂದಿದ್ದು, ಕೃಷಿ ತಂತ್ರಜ್ಞಾನ ಮತ್ತು ರೈತರ ನಡುವಿನ ಅಂತರವನ್ನು ಕಡಿಮೆ ಮಾಡುವ ಧ್ಯೇಯದೊಂದಿಗೆ ಮುನ್ನೆಲೆಗೆ ಬಂದಿದೆ.

## ಏನಿದು ಭಾರತ್ ವಿಸ್ತಾರ್?

ಭಾರತ್ ವಿಸ್ತಾರ್‌ನ ವಿಸ್ತೃತ ರೂಪ ಭಾರತ್ ವರ್ಚುವಲಿ ಇಂಟಿಗ್ರೇಟೆಡ್ ಸಿಸ್ಟಂ ಟು ಆಕ್ಸೆಸ್ ಅಗ್ರಿಕಲ್ಚರಲ್ ರಿಸೋರ್ಸ್. ಅಂದರೆ, ರೈತರಿಗೆ ಬೇಕಾದ ಎಲ್ಲಾ ಕೃಷಿ ಮಾಹಿತಿ ಮತ್ತು ಸೌಲಭ್ಯಗಳನ್ನು ಒಂದೇ ಡಿಜಿಟಲ್ ವೇದಿಕೆಯಲ್ಲಿ ಒದಗಿಸುವ ವ್ಯವಸ್ಥೆ. ಇದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಅಭಿವೃದ್ಧಿಪಡಿಸಿದ 'ಡಿಜಿಟಲ್ ಕೃಷಿ ವಿಶ್ವಕೋಶ'ವೂ ಹೌದು.

ಎಐ ಚಾಟ್‌ಬಾಟ್ ಆದ 'ಭಾರ್ತಿ' (Bharti) ತಂತ್ರಾಂಶ ಒಳಗೊಂಡ ಈ ವೇದಿಕೆ, ರೈತರೊಂದಿಗೆ ಮನುಷ್ಯರಂತೆ ಮಾತನಾಡುತ್ತದೆ. ರೈತರು ಧ್ವನಿ ಮೂಲಕ ಮಾಹಿತಿ ಅಥವಾ ಪ್ರಶ್ನೆ ಕೇಳಿದರೆ, ಇದು ತಕ್ಷಣವೇ ಉತ್ತರಿಸುತ್ತದೆ. ಭಾರತದ ವೈವಿಧ್ಯವನ್ನು ಗಮನದಲ್ಲಿಟ್ಟುಕೊಂಡು, ಕನ್ನಡ ಸೇರಿದಂತೆ 11ಕ್ಕೂ ಹೆಚ್ಚು ಪ್ರಾದೇಶಿಕ ಭಾಷೆಗಳಲ್ಲಿ ವಿನ್ಯಾಸಗೊಳಿಸಲಾಗಿದೆ. ಹವಾಮಾನ ಬದಲಾವಣೆ, ಮಾರುಕಟ್ಟೆ ದರ ಮತ್ತು ಕೀಟಬಾಧೆ ಬಗ್ಗೆ ಕ್ಷಣಕ್ಷಣದ ಮಾಹಿತಿಯನ್ನು ಇಲ್ಲಿ ಒದಗಿಸುವುದು ಕೇಂದ್ರ ಸರ್ಕಾರದ ಉದ್ದೇಶ.

## ಹೇಗೆಲ್ಲಾ ರೈತರಿಗೆ ಉಪಯೋಗ?

ಮುಂದಿನ 7 ದಿನಗಳ ಮಳೆ ಮತ್ತು ಗಾಳಿಯ ಮುನ್ಸೂಚನೆ ಒಳಗೊಂಡ ನಿಖರ ಹವಾಮಾನ ಮಾಹಿತಿ ಒದಗಿಸುತ್ತದೆ. ಬಿತ್ತನೆ ಅಥವಾ ಕಟಾವಿಗೆ ಸರಿಯಾದ ಸಮಯ ಯಾವುದೆಂದು ಪ್ರಶ್ನೆ ಹಾಕಿದರೆ, ಕ್ಷಣಾರ್ಧದಲ್ಲಿ ಉತ್ತರವನ್ನೂ ನೀಡುತ್ತದೆ. ಮಣ್ಣಿನ ಆರೋಗ್ಯ ಕಾರ್ಡ್ ಆಧಾರದ ಮೇಲೆ ಎಷ್ಟು ಗೊಬ್ಬರ ಮತ್ತು ನೀರು ಬಳಸಬೇಕೆಂದೂ ಶಿಫಾರಸು ಮಾಡುತ್ತದೆ.

ಹತ್ತಿರದ ಎಪಿಎಂಸಿ ಮಾರುಕಟ್ಟೆಗಳಲ್ಲಿ ಬೆಳೆಗಳ ಬೆಲೆಯನ್ನು ಹೋಲಿಕೆ ಮಾಡಲು ಮತ್ತು ಆಯಾ ದಿನದ ನೈಜ ಬೆಲೆ ತಿಳಿಯಲು ನೆರವಾಗುತ್ತದೆ. ಅದಕ್ಕಾಗಿ ಮಾರುಕಟ್ಟೆಗಳೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿರುತ್ತದೆ. ಪಿಎಂ–ಕಿಸಾನ್ ಕಂತುಗಳು, ಬೆಳೆ ವಿಮೆ ಮತ್ತು ಸಬ್ಸಿಡಿ ಅರ್ಜಿಗಳ ಸ್ಥಿತಿಯನ್ನೂ ಇಲ್ಲಿ ಪರಿಶೀಲಿಸಬಹುದು. ಜೊತೆಗೆ,

- ವಿವಿಧ ಕೃಷಿ ವೇದಿಕೆಗಳ ನಡುವಿನ ಮಾಹಿತಿ ಕಂದಕವನ್ನು ನೀಗಿಸಿ, ಏಕೀಕೃತ ದತ್ತಾಂಶ ವ್ಯವಸ್ಥೆಯನ್ನು ರೂಪಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಬಲಪಡಿಸಿ ಪ್ರತಿ ರೈತರನ್ನೂ ಸಬಲೀಕರಣ ಮಾಡುವುದು.
- ಬ್ಯಾಂಕ್ ಸಾಲ, ಮಾರುಕಟ್ಟೆ ಮತ್ತು ತಂತ್ರಜ್ಞಾನದ ನೆರವಿನ ಸಮಗ್ರ ಕೃಷಿ ಪರಿಸರ ವ್ಯವಸ್ಥೆ ರೂಪಿಸುವುದು.
- ಸುಧಾರಿತ ಮಷಿನ್ ಲರ್ನಿಂಗ್ ತಂತ್ರಜ್ಞಾನದ ಮೂಲಕ ಹವಾಮಾನದ ಎಚ್ಚರಿಕೆಗಳನ್ನು ತಲುಪಿಸುವುದರ ಜೊತೆಗೆ ಅವರ ಬೆಳೆಗಳ ಆರೋಗ್ಯದ ವಸ್ತುಸ್ಥಿತಿಯನ್ನು ತಿಳಿಸುವುದು.
- ಏಕೀಕೃತ ಡಿಜಿಟಲ್ ವೇದಿಕೆಯ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ನೇರವಾಗಿ ರೈತರಿಗೆ ತಲುಪಿಸುವುದು.
- 22ಕ್ಕೂ ಅಧಿಕ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿರುವ ಇಂಟರ್‌ಫೇಸ್ ಒಳಗೊಂಡಿರುವ ಈ ವೇದಿಕೆಯು ಆ ಎಲ್ಲ ಭಾಷೆಗಳಲ್ಲಿ ಧ್ವನಿ ಸೌಲಭ್ಯ ಒದಗಿಸುತ್ತದೆ.
- ಸುರಕ್ಷಿತ ಡಿಜಿಟಲ್ ವ್ಯವಸ್ಥೆಯೊಂದಿಗೆ ಹೊಸ ಹೊಸ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಕೃಷಿಗೆ ಸಂಬಂಧಿಸಿದ ನವೋದ್ಯಮಗಳಿಗೆ ಉತ್ತೇಜನ ನೀಡುವುದು.
- ರಾಜ್ಯ ಭೂದಾಖಲೆಗಳೊಂದಿಗೆ ಸಮನ್ವಯ ಸಾಧಿಸಿ, ಸ್ಥಳೀಯ ಮಟ್ಟದಲ್ಲಿ ಕೃಷಿ ತಾಂತ್ರಿಕ ನೆರವು ಒದಗಿಸುವ ಏಕೀಕೃತ ವ್ಯವಸ್ಥೆ ಕಲ್ಪಿಸುವುದು.

## ಇದನ್ನು ಬಳಸುವುದು ಹೇಗೆ?

1) 'BharatVISTAAR' ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅಥವಾ ವೆಬ್‌ಸೈಟ್‌ಗೆ ಲಾಗಿನ್ ಆಗಿ ಬಳಸಬಹುದು.
2) 155261ಕ್ಕೆ ಕರೆ ಮಾಡಿ ತಮ್ಮ ಭಾಷೆಯಲ್ಲೇ ಮಾಹಿತಿ ಪಡೆಯಬಹುದು.
3) ವಾಟ್ಸ್‌ಆ್ಯಪ್ ಚಾಟ್‌ಬಾಟ್ ಮೂಲಕವೂ ಮೆಸೇಜ್ ಕಳುಹಿಸಿ ಮಾಹಿತಿ ತಿಳಿದುಕೊಳ್ಳಬಹುದು. ■